# ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಬೆಂಗಳೂರು

ಅನುಸೂಚಿ-ಎ ೮

(ಉಪವಿಧಿ ಸಂಖ್ಯೆ : 4.1)

## ನಕ್ಷೆ ಮಂಜೂರಾತಿ ಪತ್ರ

ಕ್ರಮ ಸಂಖ್ಯೆ: ಬೆಂಅಪ್ರಾ/ನಮ/ಅಸ/ಅಅ-2/ತಾಸ-3/ಉ/20/2017-18
ದಿನಾಂಕ: 12.01.2018

ಆಯುಕ್ತರವರ ಕಛೇರಿ,
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ,
ಬೆಂಗಳೂರು.

ಮಾನ್ಯ ಆಯುಕ್ತರವರ ಆದೇಶ ಸಂಖ್ಯೆ 5986 ದಿನಾಂಕ 15.12.2017 ರಂದು ನಕ್ಷೆ ಮಂಜೂರಾಗಿರುತ್ತದೆ. ಅರ್ಜಿದಾರರು ಬೆಂಗಳೂರು ಉತ್ತರ ತಾಲ್ಲೂಕು, ಬಿದರಹಳ್ಳಿ ಹೋಬಳಿ ಚಿಕ್ಕುಬ್ಬಿ ಗ್ರಾಮದ Sy.No.43(p) & 45(p) ರಲ್ಲಿ ಬ್ಲಾಕ್ 1 ರಿಂದ 8ರ ವರೆಗೆ ನೆಲ + 02 ಮೇಲಂತಸ್ತು + ಟೆರೆಸ್ ಇದ್ದು, 54 ವಸತಿ ಘಟಕಗಳನ್ನೊಳಗೊಂಡ ಕಟ್ಟಡದ ನಕ್ಷೆಯ ನಿವೇಶನದ ವಿಸ್ತೀರ್ಣವು 28378.34 ಚ.ಮೀ ಇದ್ದು ಕಟ್ಟಡದ ಆವೃತ ಪ್ರದೇಶ 14286.68 ಇರುತ್ತದೆ.

**ಶ್ರೀಮತಿ/ಶ್ರೀ**

M/s.Assetz Value Homes North Pvt.Ltd.,
#2/1, Embassy Icon Annex,
2[nd] Floor, Infantry Road,
Bangalore 560 001

**ಮಾನ್ಯರೆ,**

ನೀವು, ಬೆಂಗಳೂರು ಉತ್ತರ ತಾಲ್ಲೂಕು, ಬಿದರಹಳ್ಳಿ ಹೋಬಳಿ ಚಿಕ್ಕುಬ್ಬಿ ಗ್ರಾಮದ Sy.No.43(p) & 45(p) ರಲ್ಲಿ ಬ್ಲಾಕ್ 1 ರಿಂದ 8ರ ವರೆಗೆ ನೆಲ + 02 ಮೇಲಂತಸ್ತು + ಟೆರೆಸ್ ಒಳಗೊಂಡಂತೆ ಕಟ್ಟಡ ನಿರ್ಮಾಣ ಮಾಡಲು, ದಿನಾಂಕ:16.11.2017 ರಲ್ಲಿ ಈ ಕಛೇರಿಗೆ ಅರ್ಜಿ ಸಲ್ಲಿಸಿ, ನಕ್ಷೆ ಮಂಜೂರಾತಿ ಕೋರಿರುತ್ತಿರಿ ನಕ್ಷೆ ಮಂಜೂರಾತಿಯನ್ನು ದಿನಾಂಕ: 12.01.2018 ರಿಂದ ದಿನಾಂಕ: 11.01.2020 ವರೆಗೆ ಈ ಕೆಳಕಂಡ ಷರತ್ತುಗಳನ್ನು ವಿಧಿಸಿ ಮಂಜೂರಾತಿ ಮಾಡಲಾಗಿದೆ ಎಂದು ಈ ಮೂಲಕ ನಾನು ತಿಳಿಯಪಡಿಸಿದ್ದೇನೆ.

### ಷರತ್ತುಗಳು

1. ಪ್ರಾಧಿಕಾರದ ಮಂಜೂರಾದ ನಕ್ಷೆಯ ಪ್ರತಿಯನ್ನು ಕಟ್ಟಡ ನಿರ್ಮಾಣ ಮಾಡುವ ಸ್ಥಳದಲ್ಲಿ ಪ್ರದರ್ಶಿಸತಕ್ಕದ್ದು.
2. ಸಂಬಂಧಪಟ್ಟ ಪ್ರಾಧಿಕಾರದ ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರವರಿಗೆ ತಳಪಾಯ ತೆಗೆಯುವುದಕ್ಕೆ ಮುಂಚೆ ಅರ್ಜಿ ಸಲ್ಲಿಸಿ ಪ್ರಾರಂಭ ಮಾಡಲು ಸೂಕ್ತ ಅನುಮತಿ ಪತ್ರ ಪಡೆಯತಕ್ಕದ್ದು.
3. ಮಂಜೂರಾತಿಯಾದ ನಕ್ಷೆಯ ಪ್ರಕಾರ ಕಟ್ಟಡ ನಿರ್ಮಾಣ ಮಾಡತಕ್ಕದ್ದು.
4. ಪೂರ್ಣಗೊಂಡ ಕಟ್ಟಡ ಅಥವಾ ಮನೆಯನ್ನು ವಾಸಕ್ಕೆ ಉಪಯೋಗಿಸುವ ಮೊದಲು ಸಂಬಂಧಪಟ್ಟ ಅಧಿಕಾರಿಗಳಿಂದ (ಪ್ರಾಧಿಕಾರದ) ವಾಸಯೋಗ್ಯ ಅನುಮತಿ ಪತ್ರವನ್ನು ಪಡೆಯತಕ್ಕದ್ದು.
5. ನಿವೇಶನದ ಸುತ್ತಳತೆಯಲ್ಲಿ ಹಸಿರು ಸಸಿಗಳನ್ನು ನೆಡುವುದು.

ಆಯುಕ್ತರ ಪರವಾಗಿ
ಮಂಜೂರಾತಿ ನೀಡಿರುವ ಸಹಿ ಮತ್ತು
ಹುದ್ದೆಯ ಹೆಸರು

**ಅಡಕ:** ಅನುಸೂಚಿ 2, 6 ಹಾಗೂ 8
ಲಗತ್ತಿಸಿದೆ.

**ಪ್ರತಿಯನ್ನು :**

ಕಾರ್ಯಪಾಲಕ ಅಭಿಯಂತರು (ಉ), ಆರ್.ಟಿ.ನಗರ ಬಿ.ಡಿ.ಎ ವಾಣಿಜ್ಯ ಸಂಕೀರ್ಣ, ಬೆಂಗಳೂರು ರವರ ಮಾಹಿತಿಗಾಗಿ.

# Conditions

1) ಅರ್ಜಿದಾರರು ಶಾಸನಬದ್ಧ ಸಂಸ್ಥೆಗಳಿಗೆ, ಬಿಡಿಎ/ಬಿಬಿಎಂಪಿ ಗೆ ಯಾವುದಾದರೂ ಬಾಕಿ ಶುಲ್ಕಗಳನ್ನು ಪಾವತಿಸಬೇಕಿದ್ದಲ್ಲಿ ಅಂತಹ ಸಂಸ್ಥೆಗಳು ವಿಧಿಸುವ ಶುಲ್ಕವನ್ನು ಪಾವತಿಸತಕ್ಕದ್ದು.

2) ಅರ್ಜಿದಾರರು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಕಾಲ ಕಾಲಕ್ಕೆ ವಿಧಿಸುವ ಎಲ್ಲಾ ನಿಭಂದನೆಗಳಿಗೆ ಬದ್ಧರಾಗಿರತಕ್ಕದ್ದು.

3) ಮಳೆ ನೀರು ಕೊಯ್ಲನ್ನು ಕಡ್ಡಾಯವಾಗಿ ಅಳವಡಿಸುವುದು.

4) ಇಬ್ಬಗೆಯ ಕೊಳವೆ ವಿಧಾನವನ್ನು ಕುಡಿಯುವ ನೀರಿಗಾಗಿ ಹಾಗೂ ಇತರೆ ಉದ್ದೇಶಿತ ವ್ಯವಸ್ಥೆಗಳಿಗಾಗಿ ಅಳವಡಿಸುವುದು

5) ಅಭಿವೃದ್ಧಿದಾರರು ಕಟ್ಟಡಕ್ಕೆ ಸೋಲಾರ್ ಉಪಕರಣಗಳನ್ನು ಅಳವಡಿಸಿಕೊಳ್ಳತಕ್ಕದ್ದು.

6) ಅಭಿವೃದ್ಧಿದಾರರು ಕಟ್ಟಡದ ಸುರಕ್ಷತೆ ಹಾಗೂ ಭದ್ರತೆಯ ಬಗ್ಗೆ ಸಂಪೂರ್ಣವಾಗಿ ಜವಾಬ್ದಾರರಾಗಿರತಕ್ಕದ್ದು ಹಾಗೂ ಕಟ್ಟಡದ ರಚನ್ಮಾತಕ ವಿನ್ಯಾಸದ ಬಗ್ಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಯಾವುದೇ ರೀತಿಯ ಹೊಣೆಗಾರಿಕೆ ಮತ್ತು ಜವಾದ್ದಾರಿಯನ್ನು ಹೊಂದಿರುವುದಿಲ್ಲ.

7) ಅಭಿವೃದ್ಧಿ ಯೋಜನೆಯಲ್ಲಿ ಘನ ತ್ಯಾಜ್ಯಗಳನ್ನು ಪ್ಲಾಸ್ಟಿಕ್ ಹಾಗೂ ಇತ್ಯಾದಿಯಾಗಿ ವಿಂಗಡಿಸಿ Compost ಮಾಡಲು ಸೂಕ್ತ ಸ್ಥಳವನ್ನು ಕಾಯ್ದಿರಿಸತಕ್ಕದ್ದು ಹಾಗೂ ನಿಗಧಿತ ಸ್ಥಳಕ್ಕೆ ಸಾಗಿಸಲು ಸೂಕ್ತ ವ್ಯವಸ್ಥೆಯನ್ನು ಕಡ್ಡಾಯವಾಗಿ ಮಾಡಕೊಳ್ಳತಕ್ಕದ್ದು.

8) ಕಾರ್ಯದರ್ಶಿ, ಕಾರ್ಮಿಕ ಇಲಾಖೆ ರವರ ಪತ್ರ ದಿನಾಂಕ: 04-03-2006 ರ ಪತ್ರದಲ್ಲಿ ವಿಧಿಸಿರುವ ಷರತ್ತುಗಳಿಗೆ ಅಭಿವೃದ್ಧಿದಾರರು ಬದ್ಧರಾಗಿರತಕ್ಕದ್ದು.

9) ಅಭಿವೃದ್ಧಿದಾರರು ಕುಡಿಯುವ ನೀರಿನ ಸರಬರಾಜಿಗಾಗಿ ಸಂಬಂಧಪಟ್ಟ ಬಿ.ಡಬ್ಲ್ಯೂ.ಎಸ್.ಎಸ್.ಬಿ ಯನ್ನು ಅವಲಂಬಿಸದೆ ನೀರಿನ ಸರಬರಾಜಿಗಾಗಿ ತಮ್ಮ ಸ್ವಂತ ವ್ಯವಸ್ಥೆಯನ್ನು ಮಾಡಿಕೊಳ್ಳತಕ್ಕದ್ದು.

10) ಅನುಮೋದನೆ ನಕ್ಷೆ ಬಿಡುಗಡೆಗೊಳಿಸುವ ಮುನ್ನ ನಿಯಮಾವಳಿ ಪ್ರಕಾರ ವಾಹನ ನಿಲುಗಡೆಯನ್ನು ನಿವೇಶನದ ನಕ್ಷೆಯಲ್ಲಿ ಗುರುತಿಸಿ ಸಲ್ಲಿಸುವ ಷರತ್ತುಗೊಳಪಟ್ಟಿರುತ್ತದೆ.

11) ಅಭಿವೃದ್ಧಿದಾರರು ಸದರಿ ನಿವೇಶದಲ್ಲಿ ಯಾವ ಉದ್ದೇಶಕ್ಕಾಗಿ ಮೀಸಲಿಟ್ಟಿದೆಯೋ ಅದನ್ನು ಹೊರತುಪಡಿಸಿ ಇನ್ನಿತರೆ ಯಾವುದೇ ತರಹದ ನಿರ್ಮಾಣದ ಕಾರ್ಯವನ್ನು ಮಾಡುವಂತಿಲ್ಲ ಹಾಗೂ ಇತರೆ ಯಾವುದೇ ಉದ್ದೇಶಕ್ಕಾಗಿ ಉಪಯೋಗಿಸತಕ್ಕದಲ್ಲ.

12) ಅಭಿವೃದ್ಧಿದಾರರು ಭದ್ರತಾ ಸಿಬ್ಬಂದಿಯವರನ್ನು ನೇಮಿಸಿ ಕಟ್ಟಡ ನಿರ್ಮಾಣದ ಪ್ರದೇಶದ ಒಳಗೆ ಹೋಗಲು ಮತ್ತು ಹೊರಗೆ ಬರಲು ವಾಹನ ಸಾರ್ವಜನಿಕರಿಗೆ ಹಾಗೂ ವಾಹನ ಸಂಚಾರಕ್ಕೆ ಅಡಚಣೆ ಉಂಟಾಗದಂತೆ ವ್ಯವಸ್ಥೆ ಕಲ್ಪಿಸಿ ಸಂಚಾರ ವ್ಯವಸ್ಥೆಯಲ್ಲಿ ತೊಂದರೆಯಾಗದಂತೆ ನೋಡಿಕೊಳ್ಳತಕ್ಕದ್ದು, ಹಾಗೂ ವಾಹನ ತಪಾಸಣೆಗೆ ಮತ್ತು ಭದ್ರತಾ ವ್ಯವಸ್ಥೆಯನ್ನು ಸ್ವತ್ತಿನ ಒಳಭಾಗದಲ್ಲಿ ಅಳವಡಿಸಿ ನಿರ್ವಹಿಸುವುದು.

13) ಕಟ್ಟಡ ನಿರ್ಮಾಣ ಸಮಯದಲ್ಲಿ ಸೆಂಟರಿಂಗ್ ಅಥವಾ ಇನ್ನಿತರೇ ಕಾರಣಗಳಿಂದ ಏನಾದರೂ ಅನಾಹುತ ಸಂಬವಿಸಿದಲ್ಲಿ ಅದಕ್ಕೆ ಅಭಿವೃದ್ಧಿದಾರರೇ ಜವಬ್ದಾರರಾಗಿರುತ್ತಾರೆ. ನಕ್ಷೆ ಮಂಜೂರು ಮಾಡಿದ ಯಾವುದೇ ಇಲಾಖೆ/ಸಂಸ್ಥೆಯು ಜವಬ್ದಾರರಾಗಿರುವುದಿಲ್ಲ.

14) ಅಭಿವೃದ್ಧಿದಾರರು ಕಟ್ಟಡ ನಿರ್ಮಾಣ ಸಮಯದಲ್ಲಿ ಕಟ್ಟಡ ನಿರ್ಮಾಣ ಸಾಮಗ್ರಿಗಳಿಂದಾಗಲೀ ಅಥವಾ ಇನ್ನಾವುದೇ ಕಟ್ಟಡದ ಅನುಪಯುಕ್ತ ಸಾಮಗ್ರಿಗಳಿಂದ ಸಾರ್ವಜನಿಕರಿಗೆ ಹಾಗೂ ಪರಿಸರಕ್ಕೆ ಯಾವುದೇ ತೊಂದರೆಯಾಗದಂತೆ ಸೂಕ್ತ ವ್ಯವಸ್ಥೆ ಮಾಡತಕ್ಕದ್ದು. ಇದಕ್ಕೆ ಅನುಗುಣವಾಗಿ ಬ್ಯಾರಿಕೇಡಿಂಗ್ ನ್ನು ಅಳವಡಿಸಿ ನಿರ್ಮಾಣ ಕಾರ್ಯ ಕೈಗೊಳ್ಳತಕ್ಕದ್ದು.

15) ಕಟ್ಟಡ ಕೆಲಸ ಪ್ರಾರಂಭಿಸುವ ಮುನ್ನ ಪ್ರಶ್ನಿತ ಪ್ರದೇಶದಲ್ಲಿ ಕಾಮಗಾರಿಗೆ ತಾತ್ಕಾಲಿಕ ಶೌಚಾಲಯವನ್ನು ಕಡ್ಡಾಯವಾಗಿ ನಿರ್ಮಿಸುವುದು ಮತ್ತು ನಿರ್ವಹಿಸಿ ಶುಚಿತ್ವವನ್ನು ಕಾಪಾಡುವುದು.

16) ಅಭಿವೃದ್ಧದಾರರು ವಿದ್ಯುತ್ ಚ್ಚಕ್ತಿ ಟ್ರಾನ್ಸ್ ಫಾರ್ಮರ್, RWH, SWM, Garbage Yard ಹಾಗೂ S.T.P. ಗಾಗಿ (ಮಂಜೂರಾದ ನಕ್ಷೆಯಲ್ಲಿ ತೋರಿಸಿದಂತೆ) ಮೀಸಲಿರಿಸಿದ ಜಾಗದಲ್ಲಿಯೇ ಅದನ್ನು ಸ್ಥಾಪಿಸುವುದು.